**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು**

**ಸಿಸಿ. ನಂ. 2750/2025**

ಫಿರ್ಯಾದಿ : ಕಡೂರು ಪೊಲೀಸ್ ಠಾಣೆ

ವಿರುದ್ಧ

ಆರೋಪಿಗಳು : ಗುರುಸ್ವಾಮಿ ಮತ್ತು ಇತರರು

**ದೋಷಾರೋಪಣೆ**

ಶ್ರೀಮತಿ ಅಫ್ರೀನ್ ಸುಲ್ತಾನ, ಬಿ.ಎ.ಎಲ್., ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆರೋಪಿಗಳಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

1. ಶ್ರೀ ಗುರುಸ್ವಾಮಿ ವಿ. ಬಿನ್ ಲೇಟ್.ವೆಂಕಟರಾಮಪ್ಪ,
   ಸುಮಾರು 41 ವರ್ಷ, ಶಿಕ್ಷಕ,
   ವಾಸ ಃ ನಜೀರ್ ಸಾಬ್ ಬಡಾವಣೆ,
   ಕಡೂರು ಟೌನ್ ಮತ್ತು ತಾಲ್ಲೂಕು.
2. ಶ್ರೀ ಕೀರ್ತಿ ಕೆ.ಎಸ್. ಬಿನ್ ಸಿದ್ದಪ್ಪ,
   ಸುಮಾರು 29 ವರ್ಷ, ವ್ಯಾಪಾರ,
   ವಾಸ ಃ ಸುಭಾಷ ನಗರ, ಕಡೂರು ಟೌನ್.

3. ಶ್ರೀ ಸಿದ್ದಪ್ಪ ಬಿನ್ ಲೇಟ್ ತಿಪ್ಪಣ್ಣ,
ಸುಮಾರು 55 ವರ್ಷ, ವ್ಯವಸಾಯ,
ವಾಸ ಃಸುಭಾಷ ನಗರ, ಕಡೂರು ಟೌನ್.
4. ಶ್ರೀಮತಿ ಕುಸುಮ ಜೆ.ಕೆ. ಕೋಂ ಕೀರ್ತಿ ಕೆ.ಎಸ್.,
ಸುಮಾರು 27 ವರ್ಷ,
5. ಶ್ರೀಮತಿ ಮಂಜಮ್ಮ ಕೋಂ ಸಿದ್ದಪ್ಪ,
ಸುಮಾರು 50 ವರ್ಷ,
ಸುಭಾಷ ನಗರ, ಕಡೂರು ಟೌನ್.

## ದೋಷಾರೋಪಣೆ

ಶ್ರೀಮತಿ ಅಫ್ರೀನ್ ಸುಲ್ತಾನ, ಬಿ.ಎ.ಎಲ್., ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆರೋಪಿಗಳಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

ಮೊದಲನೆಯದಾಗಿ ದಿನಾಂಕ 25.04.2025 ರಂದು ಬೆಳಿಗ್ಗೆ ಸುಮಾರು 8.40 ಸಮಯದಲ್ಲಿ ಕಡೂರು ಠಾಣಾ ವ್ಯಾಪ್ತಿಯ ಎಮ್ಮೆದೊಡ್ಡಿ ಗ್ರಾಮದ ಸರ್ವೇ ನಂಬರ್ 161 ರಲ್ಲಿನ ತೆಂಗು, ಅಡಿಕೆ ತೋಟದಲ್ಲಿ ಚಾಸಾ–1 ಶ್ರೀಮತಿ ಭಾಗ್ಯಮ್ಮ, ಚಾಸಾ–2 ಗಂಗಾಧರ ಚಾಸಾ–3 ನಾಗಾನಾಯ್ಕ ಯಾನೆ ನಾಗರಾಜರವರು ಕೆಲಸ ಮಾಡುತ್ತಿರುವಾಗ, ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 189(2) ಸಹವಾಚಕ ಕಲಂ 190** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು, ಚಾಸಾ-1 ರವರು ತಮ್ಮ ಮನೆಯಿಂದ ಅಡಿಕೆ ಒಣಗಿಸುವ ಮನೆಗೆಹೋಗಲು ರಸ್ತೆಯಲ್ಲಿ ಹೋಗುತ್ತಿರುವಾಗ, ನಿಮ್ಮಗಳ ಪೈಕಿ 2 ಮತ್ತು 3 ನೇ ಆರೋಪಿತರಾದ ನೀವು ಚಾಸಾ-1 ರವರನ್ನು ಅಡ್ಡಗಟ್ಟಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 126(2) ಸಹವಾಚಕ ಕಲಂ 190** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಚಾಸಾ-1 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 329(3) ಸಹವಾಚಕ ಕಲಂ 190** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು 2 ರಿಂದ 5 ನೇ ಆರೋಪಿತರಿಗೆ ಜಗಳ ಮಾಡಲು ಕುಮ್ಮಕ್ಕು ನೀಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 49 ಸಹವಾಚಕ ಕಲಂ 190** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಐದನೆಯದಾಗಿ, ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು ಚಾಸಾ-1 ಮತ್ತು 2 ರವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದಾಗ, ಚಾಸಾ-2 ರವರು ಯಾರಿಗೆ ಬೈಯ್ಯುತ್ತಿದ್ದೀಯಾ ಎಂದು ಕೇಳಿದ್ದಕ್ಕೆ, ನಿಮ್ಮಗಳ ಪೈಕಿ 2 ಮತ್ತು 3 ನೇ ಆರೋಪಿತರಾದ ನೀವು ಚಾಸಾ-2 ರವರಿಗೆ ಏನೋ ನಿನ್ನಮ್ಮನ್ ಸೂಳೆಮಗನೇ ನಿನ್ನೆ ಬಂದು ನಿನ್ನ ಹೆಂಡತಿಗೆ ವಾರ್ನಿಂಗ್ ಮಾಡಿ ಹೋಗಿದ್ದೆವು ನೀನು ರಾಜಿ ಮಾಡಿಸುವುದಿಲ್ಲವೆಂದು ಹೇಳಿದ್ದೀಯಂತೆ ಎಂದು ಅವಾಚ್ಯ

ಶಬ್ದಗಳಿಂದ ನಿಂದಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 352 ಸಹವಾಚಕ ಕಲಂ 190** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಆರನೆಯದಾಗಿ, ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು ನಿಮ್ಮಗಳ ಪೈಕಿ 2 ಮತ್ತು 3 ನೇ ಆರೋಪಿತರಾದ ನೀವು ಕಾಲಿನಿಂದ ಚಾಸಾ-2 ರವರ ಹೊಟ್ಟೆಗೆ ಹೊಡೆದು ನೋವುಂಟು ಮಾಡಿ ಸ್ವ ಇಚ್ಛೆಯಿಂದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 115(2) ಸಹವಾಚಕ ಕಲಂ 190** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಏಳನೆಯದಾಗಿ, ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು ನಿಮ್ಮಗಳ ಪೈಕಿ 3 ನೇ ಆರೋಪಿಯು ಎಡಮಟ್ಟೆಯಿಂದ ಚಾಸಾ-2 ರವರ ಬೆನ್ನಿಗೆ, ಕಾಲಿಗೆ ಹೊಡೆದು ಸ್ವ ಇಚ್ಛೆಯಿಂದ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 118(1) ಸಹವಾಚಕ ಕಲಂ 190** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಎಂಟನೆಯದಾಗಿ, ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು ನಿಮ್ಮಗಳ ಪೈಕಿ 2 ನೇ ಆರೋಪಿಯು ಮಚ್ಚಿನಿಂದ ಚಾಸಾ-2 ರವರಿಗೆ ಹೊಡೆಯಲು ಬಂದಾಗ, ಚಾಸಾ-1 ರವರು 2 ಮತ್ತು 3 ನೇ ಆರೋಪಿತರಾದ ನಿಮಗೆ ಯಾಕಪ್ಪ ನನ್ನ ಗಂಡನಿಗೆ ಹೊಡೆಯುತ್ತಿದ್ದೀರಾ ಎಂದು ಕೇಳಿದ್ದಕ್ಕೆ, 2 ಮತ್ತು 3 ನೇ ಆರೋಪಿತರಾದ ನೀವು ಚಾಸಾ-1 ಭಾಗ್ಯಮ್ಮ ರವರ ಕರಿಮಣಿ ಸರವನ್ನು ಮತ್ತು ಅವರು ಧರಿಸಿದ್ದ ರವಿಕೆಯನ್ನು ಹರಿದು, ಚಾಸಾ-1 ರವರ ಮಾನಕ್ಕೆ ಧಕ್ಕೆಯುಂಟು

ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 74 ಸಹವಾಚಕ ಕಲಂ 190** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೀಯದೊಳಗೆ ಮಾಡಿರುವಿರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮ ಕೂಟ ಕಟ್ಟಿಕೊಂಡು ಬಂದು ಚಾಸಾ-1ರವರ ಮನೆಯ ಹತ್ತಿರ ಬಂದು ಚಾಸಾ-1 ಮತ್ತು 2 ರವರಿಗೆ ನಿಮ್ಮನ್ನು ಮತ್ತು ನಿಮ್ಮ ಕುಟುಂಬದವರನ್ನು ಕೊಲೆ ಮಾಡುತ್ತೇನೆ ಎಂದು ಹಾಗೂ ಚಾಸಾ-3 ರವರನ್ನು ಉದ್ದೇಶಿಸಿ ನೀನು ಕೇಸ್ ನಂ.256/2024 ರಲ್ಲಿ ಏನಾದರೂ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದರೆ ನಿನ್ನಮ್ಮ ಸುಮ್ಮನೆ ಬಿಡುವುದಿಲ್ಲವೆಂದು ಕೊಲೆ ಮಾಡುತ್ತೇವೆಂದದು ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾಧನೆಯನ್ನುಂಟು ಮಾಡಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 351(3) ಸಹವಾಚಕ ಕಲಂ 190** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೀಯದೊಳಗೆ ಮಾಡಿರುವಿರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

1 ನೇ ಆರೋಪಿ ಉತ್ತರಃ ತಿಳಿಯಿತು

2 ನೇ ಆರೋಪಿ ಉತ್ತರಃ ತಿಳಿಯಿತು

3 ನೇ ಆರೋಪಿ ಉತ್ತರಃ ತಿಳಿಯಿತು

4 ನೇ ಆರೋಪಿ ಉತ್ತರಃ ತಿಳಿಯಿತು

5 **ನೇ ಆರೋಪಿ ಉತ್ತರಃ** ತಿಳಿಯಿತು

2. **ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ**?

1 **ನೇ ಆರೋಪಿ ಉತ್ತರಃ** ಯಾವುದೇ ತಪ್ಪು ಮಾಡಿರುವುದಿಲ್ಲ. ವಿಚಾರಣೆ ಆಗಬೇಕು.

2 **ನೇ ಆರೋಪಿ ಉತ್ತರಃ** ಯಾವುದೇ ತಪ್ಪು ಮಾಡಿರುವುದಿಲ್ಲ. ವಿಚಾರಣೆ ಆಗಬೇಕು.

3 **ನೇ ಆರೋಪಿ ಉತ್ತರಃ** ಯಾವುದೇ ತಪ್ಪು ಮಾಡಿರುವುದಿಲ್ಲ. ವಿಚಾರಣೆ ಆಗಬೇಕು.

4 **ನೇ ಆರೋಪಿ ಉತ್ತರಃ** ಯಾವುದೇ ತಪ್ಪು ಮಾಡಿರುವುದಿಲ್ಲ. ವಿಚಾರಣೆ ಆಗಬೇಕು.

5 **ನೇ ಆರೋಪಿ ಉತ್ತರಃ** ಯಾವುದೇ ತಪ್ಪು ಮಾಡಿರುವುದಿಲ್ಲ. ವಿಚಾರಣೆ ಆಗಬೇಕು.

ಈ ಮೇಲಿನ ಆರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ ಅವರು ನೀಡಿದ ಉತ್ತರವನ್ನು ಯಥಾ ಪ್ರಕಾರವಾಗಿ ದಾಖಲಿಸಿಕೊಂಡಿದ್ದೇನೆ.

**ದಿನಾಂಕಃ** 26 **ನೇ** ಡಿಸಂಬರ್ 2025.

-ಸಹಿ-

(ಅಫ್ರಿನ್ ಸುಲ್ತಾನ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ.ಗಳು, ಕಡೂರು.